# **I ನೇ ಹೆಚ್ಚುವರಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ**

O.S.No.479/2013

PW-1

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 13-06-2019.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರು ಶ್ರೀ ಎಂ ಎಂ ಎಸ್ ರವರಿಂದ**

**1.** ದಾವೆಯನ್ನು ಹಾಕಲು ಮಾಹಿತಿಯನ್ನು ನನ್ನ ತಂದೆಯವರು ನೀಡಿರುತ್ತಾರೆ. ಮಾಹಿತಿಯನ್ನು ನೀಡುವ ಸಂದರ್ಭದಲ್ಲಿ ನಾನು ಹಾಜರು ಇದ್ದೆ.

2. ವಾದ ಪತ್ರದ ಶೆಡ್ಯೂಲ ಎ, ಬಿ ಮತ್ತು ಸಿ ಗೆ ಸಂಬಂಧಿಸಿದಂತೆ ದಾವೆಯನ್ನು ಹಾಕಿರುತ್ತೇನೆ. ವಾದ ಪತ್ರದ ಶೆಡ್ಯೂಲ ಎ ನಲ್ಲಿ ತೋರಿಸಿದ ಆಸ್ತಿಯು ನನ್ನ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯು ನನ್ನ ಅಜ್ಜನವರ ತಂದೆಯಿಂದ ನಮಗೆ ಬಂದಿರುತ್ತದೆ.

**3.** ನನ್ನ ಅಜ್ಜನ ತಂದೆಯ ಹೆಸರು ನಾರಾಯಣ ಉರ್ಫ ನಾನಾ ಎಂದು ಇರುತ್ತದೆ. ನಾನಾರವರಿಗೆ ವಿಶ್ವಂಬರ ನಾನಾ ನಾಕಾಡಿ, ಪ್ರಭಾಕರ ನಾನಾ ನಾಕಾಡಿ, ವಸಂತ ನಾನಾ ನಾಕಾಡಿ ಎಂಬ ಮೂರು ಮಕ್ಕಳು ಇದ್ದರು. ನಾನಾರವರಿಗೆ ಹೆಣ್ಣು ಮಕ್ಕಳು ಇದ್ದರೋ ಇಲ್ಲವೋ ಎಂಬ ಬಗ್ಗೆ

ನನಗೆ ಗೊತ್ತಿಲ್ಲ. ನಾನಾರವರ ಕುಟುಂದ ವಂಶಾವಳಿ ಬಗ್ಗೆ ನನಗೆ ಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನಾರವರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ದಾವೆಯ ಶೆಡ್ಯೂಲ ಎ ಆಸ್ತಿಯನ್ನು ನಾನಾರವರ ತಂದೆಯವರು ಖರೀದಿಸಿದ್ದರು. ನಾನಾರವರ ತಂದೆಯ ಹೆಸರು ನರಸಪ್ಪ. ದಾವಾ ಶೆಡ್ಯೂಲ ಎ ಆಸ್ತಿಯನ್ನು ನರಸಪ್ಪ ಯಾವ ವರ್ಷ ಖರೀದಿಸಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಸದರಿ ದಾವಾ ಶೆಡ್ಯೂಲ ಎ ಗೆ ಸಂಬಂಧಿಸಿದ ಆಸ್ತಿಯ ಖರೀದಿ ಪತ್ರವನ್ನು ನೋಡಿಲ್ಲ. ನಿಪಿಃ 2 ರಲ್ಲಿರುವ ದಾವಾ ಶೆಡ್ಯೂಲ ಎ ಆಸ್ತಿಯ ಪೂರ್ಣ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ರುವ ಇಷ್ಟೇ ದಾಖಲೆ ಎಂದು ನುಡಿಯುತ್ತಾರೆ. ನ್ಯಾಯಾಲಯವನ್ನು ದಾರಿ ತಪ್ಪಿಸಲು ನಿಪಿಃ 2 ರಲ್ಲಿ ಕೆಲವೇ ದಾಖಲೆಗಳನ್ನು ಹಾಜರುಪಡಿಸಿದ್ದಿರೀ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ ಎ ಆಸ್ತಿಗೆ ಸಬಂಧಿಸಿದಂತೆ ಸಿ ಟಿ ಎಸ ನಲ್ಲಿ ವಾದಿ ಮತ್ತು ನೇ ಪ್ರತಿವಾದಿಯ ಹೆಸರನ್ನು ಹೊರತುಪಡಿಸಿ ಯಾರು ಹೆಸರು ನಮೂದಾಗಿದೆ ಎಂದರೆ ಸಾಕ್ಷಿಯು ಅವರನ್ನು ಹೊರುತುಪಡಿಸಿ ಬೇರೆ

ಯಾರ ಹೆಸರು ನಮೂದಾಗಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು1 ನೇ ಪ್ರತಿವಾದಿ ಹೆಸರು ದಾವಾ ಶೆಡ್ಯೂಲ ಎ ನಲ್ಲಿ ನಮೂದಾಗುವ ಪೂರ್ವದಲ್ಲಿ ವಸಂತ ನಾಕಾಡಿ , ಪ್ರಭಾಕರ ನಾಕಾಡಿ ಮತ್ತು ವಿಶ್ವಂಬರ ನಾಕಾಡಿ ಎಂಬುವವರು ಹೆಸರು ನಮೂದಾಗಿತ್ತು. ವಿಶ್ವಂಬರರವರು ತೀರಿ ಹೋದ ನಂತರ ವಾದಿ ಮತ್ತು 1 ನೇ ಪ್ರತಿವಾದಿ ಹೆಸರು ದಾವಾ ಶೆಡ್ಯೂಲ ಎ ಆಸ್ತಿಯಲ್ಲಿ ನಮುದಾಗಿದ್ದು ಉಳಿದ ಪ್ರಭಾಕರ ನಾಕಾಡಿ ವಸಂತ ನಾಕಾಡಿ ರವರ ಹೆಸರು ಏನಾಯಿತು ಎಂದು ಸಾಕ್ಷಿಗೆ ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದರಿಯವರು ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಮತ್ತು ದಾವೆಯು ಚಾಲ್ತಿಯಲ್ಲಿರುವಾಗಲೇ ಅವರು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ದಾವೆಯ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ ಯಾವ ನ್ಯಾಯಾಲಯದ ಮುಂದೆ ದಾವೆಯು ಚಾಲ್ತಿಯಲ್ಲಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಪ್ರಭಾಕರ ನಾಕಾಡಿ ಮತ್ತು ವಸಂತ ನಾಕಾಡಿ ರವರು ರಾಜೇಶ ಮನೋಹರ ಹೇರೆಕರ ಮತ್ತು ಪ್ರಮೋದ ಹೇರೆಕರ ದಾವಾ

ಶೆಡ್ಯೂಲ ಎ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಸದರಿಯುವರು ದಾವಾ ಶೇಡ್ಯೂಲ ಎ ಆಸ್ತಿಯನ್ನು ಯಾವ ವರ್ಷ ಮಾರಾಟ ಮಾಡಿದ್ದಾರೆಂದು ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂ 756 ರಲ್ಲಿ ಇರುವ ಒಟ್ಟು ಜಮೀನಿನ ವಿಸ್ತೀರ್ಣವು 568.56 ಚದರ ಮೀಟರ . ಸರ್ವೆ ನಂ 756 ರಲ್ಲಿರುವ ಒಟ್ಟು ಜಮೀನು ವಿಶ್ವಂಬರ ನಾಕಾಡಿರವರಿಗೆ ಸಂಬಂಧಿಸಿದ್ದು ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಆಸ್ತಿಯು 3 ಜನ ಅಣ್ಣ ತಮ್ಮಂದಿರಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾರೆ. ಸದರಿ ಆಸ್ತಿಯಲ್ಲಿ ವಿಶ್ವಂಬರರವರಿಗೆ 1/3 ರ ಹಿಸ್ಸಾ ಇತ್ತು. ಪ್ರಭಾಕರ ಮತ್ತು ವಸಂತ ಇವರನ್ನು ಬಿಟ್ಟು ನಮ್ಮ ಕುಟುಂಬದವರಲ್ಲಿ ಬೇರೆ ಶೆಡ್ಯೂಲ ಎ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ. ನನ್ನ ಅಜ್ಜಿಯ ಹೆಸರು ಲಕ್ಷ್ಮಿಬಾಯಿ ಇರುತ್ತದೆ.

4. ಲಕ್ಷ್ಮಿಬಾಯಿ ಮತ್ತು 3 ನೇ ಪ್ರತಿವಾದಿಯ ದಾವಾ ಶೆಡ್ಯೂಲ ಎ ಆಸ್ತಿಯಲ್ಲಿರುವ ತಮ್ಮ ಹಿಸ್ಸೆಯನ್ನು ಹೇರೆಕರವರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ.

5. ದಾವಾ ಶೆಡ್ಯೂಲ ಎ ಆಸ್ತಿಗೆ ಸಂಬಂಧಿಸಿದ ಸಂಪೂರ್ಣ ಸಿ ಟಿ ಎಸ ಎಕ್ಸಟ್ರಾಕ್ಟನ್ನು ನಾನು ನೋಡಿಲ್ಲ.

**ಪ್ರತಿವಾದಿ ಪರ ವಕೀಲರು ವಿನಂತಿ ಮೇರೆಗೆ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾ. ಸಾಕ್ಷಿ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿಯಿದೆ.**

Sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾ. ಹಾಗೂ
ಜೆ ಎಮ್ ಎಫ್ ಸಿ, ಬೆಳಗಾವಿ